ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ : ಸನ್ಮಾನ್ಯ ಸಭಾಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ಒಪ್ಪಿಸಿದ ವರದಿಯ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರಿವಾಗಿ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದರು
1.	ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 1998	30-3-98	ರಾಜ್ಯಪಾಲರ
2.	ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 1998	30-3-98	ರಾಜ್ಯಪಾಲರು
3.	ಕರ್ನಾಟಕ ಧನವಿನಿಯೋಗ ವಿಧೇಯಕ, 1998	30-3-98	ರಾಜ್ಯಪಾಲರು
4.	ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 1998	30-3-98	ರಾಜ್ಯಪಾಲರು
5.	ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1998	30-3-98	ರಾಜ್ಯಪಾಲರು
6.	ಕರ್ನಾಟಕ ಪೊಲೀಸ್ ತಿದ್ದುಪಡಿ ವಿಧೇಯಕ, 1998	1-4-98	ರಾಜ್ಯಪಾಲರು
7.	ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 1998	7-4-98	ರಾಜ್ಯಪಾಲರು
8.	ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ 1998	19-4-98	ರಾಜ್ಯಪಾಲರು
9.	ಕರ್ನಾಟಕ ಬಾಡಿಗೆ ನಿಯಂತ್ರಣ ವಿಧೇಯಕ, 1998	20-4-98	ರಾಷ್ಟ್ರಪತಿಗಳು

ಅಧ್ಯಕ್ಷರು : ಮಂಡಿಸಲಾಯಿತು

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) ಮಾನ್ಯ ಅಧ್ಯಕ್ಷರೆ,

ಮಾನ್ಯ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿ) : ಅವರ ಪರವಾಗಿ ಅವರ ಿಸರನಲ್ಲಿರತಕ್ಕಂಥ ಕಾಗದ ಪತ್ರಗಳನ್ನು ತಮ್ಮ ಅನುಮತಿ ಪಡೆದು ಸಭೆಯ ಮುಂದಿಡುತ್ತೇನೆ.

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ 8 (3)ನೇ ಪ್ರಕರಣದ ಮೇರೆಗೆ;

1. 1960ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ (ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 27-1-1998ರಂದು ಹೊರಡಿಸಲಾದ ಡಿಪಿಎಆರ್ 84 ಎಸ್ಆರ್‌ಡಿ 94ನೇ ಕ್ರಮಾಂಕದ ಅಧಿಸೂಚನೆ;